ವಿವಿಧ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲ ಪಡೆದಿರುವ ಸಾಲಕ್ಕೆ ಬಡ್ಡಿ ದರ ಈ ಕೆಳಕಂಡಂತೆ ಇರುತ್ತದೆ.

ಮಾರುಕಟ್ಟೆ ಸಾಲ	ಶೇ.10.35
ಎಲ್.ಐ.ಸಿ	ಶೇ. 12
ಜಿ.ಐ.ಸಿ.	ಶೇ. 12
ನಬಾರ್ಡ್	ಶೇ. 11
ಎನ್.ಸಿ.ಡಿ.ಸಿ	ಶೇ.12.75
ವಿದೇಶಿ ಸಾಲದ ಬಡ್ಡಿ ದರ	ಶೇ. 12
ಸಣ್ಣ ಉಳಿತಾಯ	ಶೇ.11.50
ಕೇಂದ್ರ ಸರ್ಕಾರದ ಸಾಲ	ಶೇ.11.50

ಸಾಲ ಮರುಪಾವತಿಗಳನ್ನು ಆಯಾ ಸಾಲದ ಷರತ್ತು ಮತ್ತು ನಿಬಂದನೆಗಳಂತೆ ಆಯವ್ಯಯದಲ್ಲಿ ಅವಕಾಶ ಮಾಡುವುದರ ಮೂಲಕ ಮರು ಪಾವತಿ ಮಾಡಲಾಗುವುದು.

ವಿವಿಧ ಇಲಾಖೆಗಳಲ್ಲಿ ಇಲಾಖೆಯ ಅಭಿವೃದ್ಧಿಗಾಗಿ ಅಭಿವೃದ್ಧಿ ಸಾಲ ಪಡೆಯಲು ಇಲಾಖೆಗಳಿಂದ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ.

ದಾವಣಗೆರೆ ನಗರಕ್ಕೆ ಕುಡಿಯುವ ನೀರಿನ ಯೋಜನೆ.

2420(2894) ಶ್ರೀ ಎನ್.ಎ. ರವೀಂದ್ರನಾಥ್ (ಮಾಯಕೊಂಡ) :— ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ದಾವಣಗೆರೆ ನಗರಕ್ಕೆ ಕುಡಿಯುವ ನೀರು ಪೂರೈಕೆಗೆ ಮಂಜೂರು ಆಗುರುವ ಯೋಜನೆಗಳು ಯಾವುವು? ಇವುಗಳ ಅಂದಾಜು ವೆಚ್ಚ ಎಷ್ಟು? ಇದುವರೆಗೂ ವಿಚ್ಚು ಮಾಡಿರುವ ಹಣ ಎಷ್ಟು?

2. ಸದರಿ ಯೋಜನೆಗಳು ನಿಧಾನ ಗತಿಯಲ್ಲಿ ನಡೆಯುತ್ತಿರುವುದಕ್ಕೆ ಕಾರಣಗಳೇನು? ಮತ್ತು ಕಳಪೆ ಕಾಮಗಾರಿ ಆಗುತ್ತಿರುವುದು ಗಮನಕ್ಕೆ ಬಂದಿದೆಯೇ?

3. ಕಾಮಗಾರಿಗಳೆಲ್ಲವೂ ಕಾಲಮಿತಿ ಯೋಜನೆಗಳೇ? ಇದ್ದಲ್ಲಿ ಕಾಲಮಿತಿ ಏನು?

4. ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು) :—

1. ದಾವಣಗೆರೆ ನಗರಕ್ಕೆ ಸಮಗ್ರ ನೀರು ಸರಬರಾಜು ಒದಗಿಸುವ 2ನೇ ಹಂತದ ಯೋಜನೆಗೆ ಸರ್ಕಾರದಿಂದ 18.12.98ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದೆ. ಈ ಯೋಜನೆಯ ಅಂದಾಜು ವೆಚ್ಚ ರೂ.4009.00 ಲಕ್ಷಗಳು. ಈ ಯೋಜನೆಗೆ ಜೂನ್ 2001ರ ಅಂತ್ಯದವರೆಗೆ ರೂ.1415.00 ಲಕ್ಷಗಳು ವಿರ್ಚಾಗಿರುತ್ತದೆ.

2. ಸದರಿ ಯೋಜನೆಯನ್ನು ಪ್ಯಾಕೇಜ್ ಟೆಂಡರ್ ಆಧಾರದ ಮೇಲೆ ಕೈಗೆತ್ತಿಕೊಳ್ಳಲಾಗಿದ್ದು, ಆಗಸ್ಟ್ 99 ರಿಂದ ಕಾಮಗಾರಿಯು ಪ್ರಗತಿಯಲ್ಲಿದೆ. ಜೂನ್ 2001ರವರೆಗೆ ಶೇಕಡ 50ರಷ್ಟು ಭೌತಿಕ ಪ್ರಗತಿಯನ್ನು ಹಾಗೂ ಶೇಕಡ 40ರಷ್ಟು ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿದೆ. ಸದರಿ ಯೋಜನೆಯ ಎಲ್ಲಾ ಕಾಮಗಾರಿಗಳನ್ನು 3ನೇ ಪಾರ್ಟಿಯಿಂದ ತಪಾಸಣೆಗೆ ಒಳಪಡಿಸಲಾಗಿದ್ದು, ಯಾವುದೇ ಕಳಪೆ ಕಾಮಗಾರಿಗಳು ನಡೆದಿರುವುದಿಲ್ಲ.

3. ಸದರಿ ಯೋಜನೆಯ ಕಾಮಗಾರಿಗಳನ್ನು 2002-03ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

4. ಈ ಯೋಜನೆಯನ್ನು ಡಿಸೆಂಬರ್ 2002ರಲ್ಲಿ ಪೂರ್ಣಗೊಳಿಸಲಾಗುವುದು.

ರಾಜ್ಯದಲ್ಲಿ ಆಡಳಿತ ಸುಧಾರಣಾ ಕಾರ್ಯಕ್ರಮಗಳು

2421 (2867) ಸಭಾಪತಿ ಯು.ಆರ್. (ಉಡುಪಿ) :— ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರಾಜ್ಯದ ಆಡಳಿತದಲ್ಲಿ ಆರ್ಥಿಕ ಸಂಕಷ್ಟಗಳನ್ನು ನಿಗ್ರಹಿಸುವ ಸಲುವಾಗಿ ಆಡಳಿತ ಸುಧಾರಣೆಗಳನ್ನು ಜಾರಿಗೆ ತರಲು ಸರ್ಕಾರ ತೆಗೆದುಕೊಂಡ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ನೀಡುವುದು.

2) ವಿವಿಧ ಇಲಾಖೆಗಳಲ್ಲಿ ಇರತಕ್ಕ ಹೆಚ್ಚುವರಿ ಸಿಬ್ಬಂದಿಗಳ ಕಡಿತಕ್ಕೆ ಸರ್ಕಾರ ಯೋಚಿಸಿದೆಯೇ?

3) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು) :—

1) ರಾಜ್ಯ ಸರ್ಕಾರವು ಆಡಳಿತ ಸುಧಾರಣಾ ಆಯೋಗವನ್ನು ನೇಮಕಾತಿ ಮಾಡಿದೆ. ಆಡಳಿತ ಸುಧಾರಣಾ ಆಯೋಗವು ಸರ್ಕಾರಕ್ಕೆ ಸಲ್ಲಿಸಿರುವ ಮಧ್ಯಂತರ